Sri D. DEVRAJA URS.—In regard to municipa l bus stands our policy is first to see that bus stands are constructed in places where there are no municipal bus stands. Where there are municipal bus stands, our policy is to buy them to the Corporation.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸ್ವಾಮಿ, ಬಸ್ಸುಗಳು ಓಡಾಡುವಾಗ್ಗೆ ನೂರಕ್ಕೆ ಐವತ್ತರಷ್ಟಾದರೂ ಬಸ್ಸುಗಳು ಅರ್ಧ ಗಂಟೆ, ಮುಕ್ಕಾಲು ಗಂಟೆ, ಎರಡು ಗಂಟೆ ಲೇಟುಮಾಡಿ ಓಡುತ್ತವೆ. ಬಸ್ಸುಗಳು ಯಾವಾಗಲೂ ಸರಿಯಾದ ವೇಳೆಗೆ ಓಡುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಪ್ರಶ್ನೆ ಕೇಳಬೇಕು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಬಸ್‌ಸ್ಟಾಂಡ್ ವಿಚಾರದಲ್ಲಿಯೇ ಇದನ್ನು ಹೇಳಬೇಕಾಗಿದೆ ಬಸ್ ಸ್ಟಾಂಡಿನಲ್ಲಿ ಷೆಲ್ಟರ್ ಇಲ್ಲದ ಮೂಲಕ ಪ್ಯಾಸೆಂಜರುಗಳಿಗೆ ಆಗುವ ತೊಂದರೆ ಏನು ಎಂಬುದನ್ನು ವಿವರಿಸಿ ಹೇಳಬೇಕಾಗಿದೆ. ಬಸ್ಸುಗಳು ಸರಿಯಾದ ವೇಳೆಗೆ ಬಂದು ಹೊರಡವೇ ಇರುವುದರಿಂದ ಪ್ಯಾಸೆಂಜರುಗಳು ಬಹಳ ಕಾಲ ಅಲ್ಲಿ ಇರಬೇಕಾಗುತ್ತದೆ. ಇದರಿಂದ ಬಹಳ ತೊಂದರೆಯಾಗುತ್ತದೆ.

Mr. SPEAKER.—I have made repeated requests. Let not the hon'ble Member argue. Let him put direct questions. Arguments should be reserved for debates.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸೀಮೆಂಟು ಇಲ್ಲ; ತೊಂದರೆ ಇದೆ ಎಂದು ಹೇಳಿದರು. ಸೀಮೆಂಟು ಇಲ್ಲದಿದ್ದರೆ, ಎಲೆಲ್ಲ ಷೆಲ್ಟರ್ ಇಲ್ಲವೋ ಅಂಥಲ್ಲ ಷೆಲ್ಟರ್ ಒದಗಿಸುವುದಕ್ಕಾಗಿ ಐರನ್ ಷೀಟ್ ಹಾಕಿ ಷೆಲ್ಟರ್ ಕಟ್ಟಿಸಿ ಪ್ಯಾಸೆಂಜರುಗಳಿಗೆ ಮಳೆ ಬಿಸಿಲು ಗಾಳಿ ಇವುಗಳಿಂದ ರಕ್ಷಣೆ ಕೊಡುತ್ತೀರಾ ?

Sri D. DEVRAJA URS.—Government is aware that bus shelters are required. Gradually it will be done.

Sri SANJEEVANATH AIKALA.—Apart from shelters to passengers, is it not a fact that the buses themselves do not have shelters ?

Mr. SPEAKER.—Should the buses get shelter in preference to passengers ?

Sri SANJEEVANATH AIKILA.—Most of the buses are lying in the open air and are exposed to the weather and are decaying.

Sri D. DEVRAJA URS.—Perhaps the hon'ble Member is not aware that everywhere buses are allowed to stand in the open. Nowhere, no Corporation in the country, has provided shelters for buses also.

Sri D. PARAMESHWARAPPA.—If a municipality builds shelters, will the Government reimburse the cost ?

Sri D. DEVRAJA URS.—Yes. The Corporation's intention is to take over such bus-stands on a phased programme.

The extent of land and the number of houses submerged due to the raising of the bund and waste-weir of Kestoor Village Tank in Tumkur Taluk.

*Q.—721. Smt. G. C. BHAGEERATHAMMA (Tumkur).—

Will the Government be pleased to state.—

(*a*) the number of years elapsed since the Kestoor Village Tank bund and waste-weir in Kora Hobli, Tumkur Taluk were raised:

(*b*) the extent of land and the number of houses submerged thereby ?

A.—Sri ALUR HANUMANTHAPPA—(Deputy Minister for Minor Irrigation).—

(*a*) Five years.
(*b*) 56 acres and 1 gunta of land and 7 mud houses.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ 56 ಎಕರೆ ಜಮೀನು ಮುಳುಗಡೆಯಾಗಿರುವ ಜಮೀನು ಮಾಲೀಕರಿಗೆ ಪರಿಹಾರ ಕೊಟ್ಟಿದ್ದೀರಾ ?

†ಶ್ರೀ ಆಲೂರು ಹನುಮಂತಪ್ಪ.—ಇದು ವರೆಗೆ ಕೊಟ್ಟಿಲ್ಲ ; ಬೇಗನೆ ಕೊಡಬೇಕೆಂದು ಮಾಡಿದ್ದೇವೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಇಷ್ಟು ನಿಧಾನವಾಗಲು ಕಾರಣವೇನು, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಆದಷ್ಟು ಜಾಗ್ರತೆ ಕೊಡಿಸಲು ಪ್ರಯತ್ನ ನಡೆದಿವೆ. ನಿಧಾನವಾಗಿದೆ ಎನ್ನುವುದನ್ನು ಒಪ್ಪುತ್ತೇವೆ. ಪರಿಹಾರವನ್ನು ಬೇಗನೆ ಕೊಡಿಸುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಲ್ಯಾಂಡ್ ಅಕ್ವಿಜೀಷನ್‌ಗೆ ಸಂಬಂಧಪಟ್ಟ ಕಾಗದ ಪತ್ರಗಳು ಕಳೆದು ಹೋಗಿವೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಆಲೂರು ಹನುಮಂತಪ್ಪ.—ಕಾಗದ ಪತ್ರಗಳನ್ನು ತರಿಸಿ ಆದಷ್ಟು ಜಾಗ್ರತೆ ಪರಿಹಾರ ಕೊಡುವುದನ್ನು ಮುಗಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಐದು ವರ್ಷ ಕಾಲವಾಗಿದ್ದರೂ ಇನ್ನೂ ಪರಿಹಾರ ಯಾಕೆ ಕೊಟ್ಟಿಲ್ಲ ?

ಶ್ರೀ ಆಲೂರು ಹನುಮಂತಪ್ಪ.—ಐದು ವರ್ಷವಾಗಿಲ್ಲ. ಆದಷ್ಟು ಜಾಗ್ರತೆ ಮುಗಿಸಬೇಕೆಂದು ಪ್ರಯತ್ನ ನಡೆಯುತ್ತಿದೆ.

ಶ್ರೀ ಜಿ. ವಿ. ಗೌಡ.—ಈ ಕಾಗದ ಪತ್ರಗಳು ಕಳೆದುಹೋದಮೇಲೆ ಪುನಃ ತಯಾರು ಮಾಡಿದ ರಿಕಾರ್ಡ್ ಆಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಸರಕಾರದಲ್ಲಿ ರಿಕಾರ್ಡು ಇದ್ದೇ ಇರುತ್ತದೆ.

ಶ್ರೀ ಬಿ. ಎರ್. ಗೌಡ.—ಫೈನಲ್ ಸ್ಕೇಜಿನಲ್ಲದೆಯೇ, ನೋಟಿಫಿಕೇಶನ್ ಇಷ್ಯು ಆಗಬೇಕಾಗಿದೆಯೇ ?, ಇದು ಯಾವ ಸ್ಕೇಜಿನಲ್ಲಿದೆ ?

ಶ್ರೀ ಆಲೂರು ಹನುಮಂತಪ್ಪ.—ನೋಟೀಸ್ ಬೇಕು.

ಶ್ರೀ ಕೆ. ಪಿ ರೇವಣಸಿದ್ದಪ್ಪ.—ಐದು ವರ್ಷವಾಗಿ ಹೋಗಿದ್ದರೂ ಇನ್ನೂ ಪರಿಹಾರ ಕೊಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಆದಷ್ಟು ಜಾಗ್ರತೆ ಮುಗಿಸಲು ಆದೇಶ ಕೊಟ್ಟಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜಿಲ್ಲಾಧಿಕಾರಿಗಳಿಂದ ರಿಪೋರ್ಟು ಒಂದೂ ಬಂದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.— ಅಂಥ ರಿಪೋರ್ಟು ಬಂದಿಲ್ಲ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಏಳು ಮಣ್ಣಿನ ಮನೆಗಳು ಮುಳುಗಡೆಯಾದ ಜನರಿಗೆ ಬೇರೆ ಕಡೆ ವಾಸಕ್ಕೆ ಮನೆಯ ಅನುಕೂಲತೆ ಮಾಡಿಕೊಟ್ಟಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಅವರಿಗೆ ತೊಂದರೆಯಾಗದ ಹಾಗೆ ಅನುಕೂಲ ಮಾಡಿ ಕೊಡಲೇ ಬೇಕು.

ಶ್ರೀ ಬಿ. ಚೆನ್ನಬೈರೇ ಗೌಡ.—ಯಾವುದೇ ಜಮೀನು ಆದರೂ ಅಕ್ವೀಸಿಷನ್ ಮಾಡಿಕೊಳ್ಳುವಾಗ ಮೊದಲು ಪರಿಹಾರ ಕೊಟ್ಟು ಅನಂತರ ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು ಎಂಬುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಕೆಲವು ಸಂದರ್ಭಗಳಲ್ಲಿ ಪಾರ್ಟಿಗಳು ಒಪ್ಪುವುದಾದರೆ ಅವಾರ್ಡ್ ಪಾಸ್ ಮಾಡುತ್ತಾರೆ ; ಆಗ ಅಡ್ವಾನ್ಸ್ ಪೇಮೆಂಟ್ ಸಹ ಮಾಡುತ್ತಾರೆ, ಪಾರ್ಟಿ ತಕರಾರು ಹಾಕಿದರೆ ಸ್ವಲ್ಪ ನಿಧಾನವಾಗುತ್ತದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಸರ್ಕಾರದ ಉತ್ತರ ಪರಿಹಾರ ಕೊಡಬೇಕೆಂದು ಇರುತ್ತದೆ ಎಂದು ಹೇಳುತ್ತೀರೋ ಅಥವಾ ಕೊಡುತ್ತೇವೆ ಎಂದು ಹೇಳುತ್ತೀರೋ ?

ಶ್ರೀ ಆಲೂರು ಹನುಮಂತಪ್ಪ.—ಕೊಟ್ಟೇ ಕೊಡಬೇಕಾಗುತ್ತದೆ.